ಎಂ.ಟಿ.ವಿ. ಆಚಾರ್ಯ ಅವರ ಕಲಾಕೃತಿಯ ಮುಖಪುಟ ಈ ಸಂಚಿಕೆಯ ಸೊಬಗನ್ನು ಹೆಚ್ಚಿಸಿದೆ. 28 ಅತಿ ಸಣ್ಣಕತೆಗಳ ಮೋಹಕ ಗುಚ್ಛ ಮನಕ್ಕೆ ಮುದ ನೀಡಿತು.

**ಎನ್. ಮಹದೇವ, ಚೆನ್ನೈ**

ಸುಂದರ ಮುಖಪುಟ. ಕತೆಗಳ ಭಂಡಾರದಲ್ಲಿ ಬಂಗಾರದಂತಹ ಅತಿ ಸಣ್ಣಕತೆಗಳು ಕಳೆಗಟ್ಟಿವೆ.

**ಎಚ್.ಎಸ್. ಸತ್ಯನಾರಾಯಣ ರಾವ್, ಅರಕಲವಾಡಿ**

ಪುಟ್ಟ ಕತೆಗಳನ್ನು ಒಡಲಲ್ಲಿರಿಸಿಕೊಂಡು ಬಂದ 'ಮಯೂರ'ವನ್ನು T20 ಮಾದರಿಯಲ್ಲಿ ಓದುವ, ಓದಿಸುವ ಆನಂದ ನಮ್ಮದಾಯಿತು.

**ಬಿ.ಆರ್. ಅಣ್ಣಾಸಾಗರ, ಸೇಡಂ**

ಒಂದೇ ಸಂಚಿಕೆಯಲ್ಲಿ ಅದೆಷ್ಟು ಪುಟ್ಟ ಕತೆಗಳು! ಒಂದಕ್ಕಿಂತ ಒಂದು ಚಿಕ್ಕ, ವಿಭಿನ್ನ, ವಿಶಿಷ್ಟ ಕತೆಗಳು... ಓದಿ ಅಚ್ಚರಿಯಾಯಿತು.


**ಎಂ.ಕೆ. ಮಂಜುನಾಥ್, ಬೆಂಗಳೂರು**

'ಒಂದು ಪರಿಪೂರ್ಣ ಕೊಲೆ' (ಈಶ್ವರಚಂದ್ರ), 'ಒಬ್ಬ' (ನಾಗತಿಹಳ್ಳಿ ಚಂದ್ರಶೇಖರ), 'ಸಮುದ್ರ' (ಅಶೋಕ ಹೆಗಡೆ), 'ಕರಿಯ ಟಿಕ್ಕು ನೀಲಿಯಾಗಿಲ್ಲ' (ನಾಗರಾಜ ವಸ್ತಾರೆ) ಕತೆಗಳು ಗಮನ ಸೆಳೆದವು.

**ಸುಂದರ್, ಬೆಂಗಳೂರು**
**ಸಬಿತಾ, ಕೊಪ್ಪಳ**

ಗೋಪೀನಾಥ ರಾವ್ ಅವರ 'ಗರ್ಜನೆ', ವಸುಧೇಂದ್ರ ಅವರ 'ಸಮಾನತೆ' ಕತೆಗಳು ವಿಶಿಷ್ಟ ನಿರೂಪಣೆಯಿಂದ ಕೂಡಿದ್ದವು.

**ಗೀತಾ ಹೆಗಡೆ, ಬೆಂಗಳೂರು**




ಚಿರಯೌವನದ ಭ್ರಮೆಯಲ್ಲಿರುವ ನಾಯಕನ ಅಸಹಾಯಕತೆಯನ್ನು ಜಯಂತ ಕಾಯ್ಕಿಣಿ ಅವರ ಅತಿ ಸಣ್ಣಕತೆ 'ಎವರ್‌ಗ್ರೀನ್' ಮಾರ್ಮಿಕವಾಗಿ ಬಿಡಿಸಿಟ್ಟಿದೆ.

**ಎಚ್. ಆನಂದ್‌ಕುಮಾರ್, ಚಿತ್ರದುರ್ಗ**
**ಕೊಹಿಮ ಬಸರಕೋಡು**

'ಮುತ್ತುಪಾಡಿಯ ಮಾಟಗಾತಿ' (ಬೊಳುವಾರು ಮಹಮದ್ ಕುಂಞ) ಕತೆ ಮಾನವೀಯತೆ, ಸ್ನೇಹ ಹಾಗೂ ಪ್ರೇಮ ಭಾವವನ್ನು ಬಿತ್ತುವ ವಿಭಿನ್ನ ಕತೆ.

**ಇಂದಿರಾ ಕೆ.ಎಸ್., ಬೆಂಗಳೂರು**

'ಗಿರಗಟ್ಲೆ ಹಳದಣ್ಣ' (ಕೃಷ್ಣ ಮಾಸಡಿ), 'ಕರಕು ಮಾಡಿನ ಮನೆ' (ವಿನಯಾ ಒಕ್ಕುಂದ), 'ಗುರುತು' (ಬಸು ಬೇವಿನಗಿಡದ), 'ಹೆಡ್ ಮಾಸ್ಟರರ ಸೈಕಲ್' (ಚಿಂತಾಮಣಿ ಕೊಡ್ಲೆಕೆರೆ) ಕತೆಗಳು ವಿಶಿಷ್ಟ ವಸ್ತು, ಶೈಲಿಯಿಂದ ಓದಿಸಿಕೊಂಡವು.

**ಎಂ.ಎಸ್. ರಮೇಶ್, ಪಡೀಲು**

ಕೆ.ಕೆ. ಗಂಗಾಧರನ್ ಮತ್ತು ಗೀತಾ ಶೆಣೈ ಅವರ 'ಅನುವಾದ ಸಂವಾದ' ಸುಗಂಧಿತ ತಂಗಾಳಿಯಂತೆ ಹಿತಾನುಭವ ನೀಡಿತು.

**ಡಾ. ಅಶೋಕಕುಮಾರ್, ಬೆಂಗಳೂರು**